KA / BG - GPO/ 2515 /WPP-47/ 2006 - 2008

ಸುವರ್ಣ ಕರ್ನಾಟಕ

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ಪತ್ರಿಕೆ

ಭಾಗ - IV-A | ಬೆಂಗಳೂರು, ಮಂಗಳವಾರ, ಅಕ್ಟೋಬರ್ ೧೬, ೨೦೦೭ (ಅಶ್ವಯುಜ ೨೪, ಶಕ ವರ್ಷ ೧೯೨೯) | ನಂ. ೧೯೧೪

ಶಿಕ್ಷಣ ಸಚಿವಾಲಯ

ಅಧಿಸೂಚನೆ

ಸಂ. ಇಡಿ 173 ಇಟಿಆರ್ 2007, ಬೆಂಗಳೂರು, ದಿನಾಂಕ: 15ನೇ ಅಕ್ಟೋಬರ್, 2007

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007ರ (ಕರ್ನಾಟಕ ಅಧಿನಿಯಮ, 2007ರ 29) 13ನೇ ಪ್ರಕರಣದ ಉಪ-ಪ್ರಕರಣ (1) ರಿಂದ ಅಗತ್ಯಪಡಿಸಲಾದಂತೆ ಅಧಿಸೂಚನೆ ಸಂಖ್ಯೆ ಇಡಿ 173 ಇಟಿಆರ್ 2007, ದಿನಾಂಕ 17.9.2007 ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು, 2007 ರ ಕರಡನ್ನು, ಕರ್ನಾಟಕ ವಿಶೇಷ ರಾಜ್ಯಪತ್ರದ ಭಾಗ IV-A (ವಿಶೇಷ ಸಂಚಿಕೆ ದಿನಾಂಕ 17.9.2007) ದಲ್ಲಿ ಪ್ರಕಟಿಸಿ, ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿರುವುದರಿಂದ ;

ಮತ್ತು ಸದರಿ ರಾಜ್ಯಪತ್ರವನ್ನು 2007ರ ಸೆಪ್ಟೆಂಬರ್ 17 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ :

ಮತ್ತು ಸ್ವೀಕರಿಸಲಾದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದ :

ಈಗ, ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007ರ (ಕರ್ನಾಟಕ ಅಧಿನಿಯಮ, 2007ರ 29) 13ನೇ ಪ್ರಕರಣದ ಉಪ-ಪ್ರಕರಣ (1) ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಈ ಮೂಲಕ ಈ ಕೆಳಗಿನಂತೆ ನಿಯಮಗಳನ್ನು ರಚಿಸಿರುತ್ತದೆ, ಎಂದರೆ:

### ನಿಯಮಗಳು

1. ಹೆಸರು ಮತ್ತು ಪ್ರಾರಂಭ.- (1) ಈ ನಿಯಮಗಳನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು, 2007 ಎಂದು ಕರೆಯತಕ್ಕದು.

(2) ಈ ನಿಯಮಗಳು, ಅವು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದು.

2. ಪರಿಭಾಷೆಗಳು.- ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, ಈ ನಿಯಮಗಳಲ್ಲಿ,-

(ಎ) "ಅಧಿನಿಯಮ" ಎಂದರೆ ಕರ್ನಾಟಕ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2007 (ಕರ್ನಾಟಕ ಅಧಿನಿಯಮ, 2007ರ 29).

(ಬಿ) "ಪ್ರಕರಣ" ಎಂದರೆ ಅಧಿನಿಯಮದ ಪ್ರಕರಣ.

3. **ಸಕ್ಷಮ ಪ್ರಾಧಿಕಾರ.-** ಕೆಳಕಂಡ ಕೋಷ್ಟಕದ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಶಾಲೆಯಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರ ವರ್ಗಾವಣೆಗೆ ಸಕ್ಷಮ ಪ್ರಾಧಿಕಾರಿಗಳು ಅದರ 3ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದವರಾಗಿರತಕ್ಕದು.

**ಕೋಷ್ಟಕ**

| ಕ್ರಮ ಸಂಖ್ಯೆ | ಶಾಲೆ | ಸಕ್ಷಮ ಪ್ರಾಧಿಕಾರಿಗಳು |
|---|---|---|
| 1 | 2 | 3 |
| i. | ಪ್ರಾಥಮಿಕ ಶಾಲೆಗಳು | ಸಂಬಂಧಪಟ್ಟ ಶೈಕ್ಷಣಿಕ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಉಪ ನಿರ್ದೇಶಕರು (ಆಡಳಿತ) |
| ii. | ಮಾಧ್ಯಮಿಕ ಶಾಲೆಗಳು | ಸಂದರ್ಭಾನುಸಾರ ಬೆಂಗಳೂರು ಅಥವಾ ಧಾರವಾಡ ಅಥವಾ ಗುಲ್ಬರ್ಗಾಗಳಲ್ಲಿನ ಸಾರ್ವಜನಿಕ ಶಿಕ್ಷಣ ಆಯುಕ್ತರ ಕಚೇರಿಯ ಸಂಬಂಧಪಟ್ಟ ಸಾರ್ವಜನಿಕ ಶಿಕ್ಷಣ ಜಂಟಿ ನಿರ್ದೇಶಕರು |
| iii. | ಪದವಿ ಪೂರ್ವ ಕಾಲೇಜು | ಪದವಿಪೂರ್ವ ಶಿಕ್ಷಣ ಆಯುಕ್ತರ ಕಚೇರಿಯಲ್ಲಿನ ಪದವಿಪೂರ್ವ ಶಿಕ್ಷಣ ಜಂಟಿ ನಿರ್ದೇಶಕರು (ಆಡಳಿತ) |

ಸಕ್ಷಮ ಪ್ರಾಧಿಕಾರಿಗಳು ಅವರಿಗೆ ಸಂಬಂಧಿಸಿದ ಅಧಿಕಾರ ವ್ಯಾಪ್ತಿಯೊಳಗೆ ಅಧಿಕಾರವನ್ನು ಚಲಾಯಿಸತಕ್ಕದ್ದು.

4. **ಗಣಕೀಕೃತ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡಲು ವೇಳಾಪಟ್ಟಿಯ ಸಿದ್ಧತೆ.-** (1) ಗಣಕೀಕೃತ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡಲು ವೇಳಾಪಟ್ಟಿಯನ್ನು ಈ ಕೆಳಗಿನಂತೆ ಸಿದ್ಧಪಡಿಸತಕ್ಕದ್ದು:-

(i) ಮೊದಲನೆಯದಾಗಿ, ಹೆಚ್ಚುವರಿ ಶಿಕ್ಷಕರನ್ನು ಅಗತ್ಯವಿರುವ ಶಾಲೆಗಳಿಗೆ ಮರು ನಿಯೋಜಿಸತಕ್ಕದ್ದು;

(ii) ಎರಡನೆಯದಾಗಿ, ಅಧಿನಿಯಮದ 5ನೇ ಪ್ರಕರಣದಡಿ ಶಿಕ್ಷಕರ ವರ್ಗಾವಣೆ;

(iii) ಮೂರನೆಯದಾಗಿ, ದೂರು ಪ್ರಕರಣಗಳ ಮೇಲೆ ವರ್ಗಾವಣೆ;

(iv) ನಾಲ್ಕನೆಯದಾಗಿ ಜೇಷ್ಠತಾ ಘಟಕದೊಳಗೆ ಕೋರಿಕೆಯ ವರ್ಗಾವಣೆಗಳು;

(v) ಐದನೆಯದಾಗಿ ಅಧಿನಿಯಮದ 6ನೇ ಪ್ರಕರಣಕ್ಕನುಗುಣವಾಗಿ ಜೇಷ್ಠತಾ ಘಟಕದ ಹೊರಗೆ ಕೋರಿಕೆಯ ವರ್ಗಾವಣೆಗಳು.

(2) ದೂರು ಪ್ರಕರಣಗಳ ವರ್ಗಾವಣೆಗಳನ್ನು ಹೊರತುಪಡಿಸಿ ಮೇಲಿನ ಎಲ್ಲಾ ಹಂತದ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಮಾತ್ರ ಮಾಡತಕ್ಕದ್ದು.

(3) ಕೋರಿಕೆಯ ವರ್ಗಾವಣೆಗಳಿಗೆ ಕೆಳಕಂಡಂತೆ ವೇಳಾಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು:-

(ಎ) ಖಾಲಿ ಹುದ್ದೆಗಳ ಅಧಿಸೂಚನೆ

(ಬಿ) ವರ್ಗಾವಣೆಗಳಿಗಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿಗಳನ್ನು ಸಲ್ಲಿಸಲು ಅಂತಿಮ ದಿನಾಂಕ

(ಸಿ) ಸಂಬಂಧಪಟ್ಟ ಅಧಿಕಾರಿಗಳಿಂದ ಅರ್ಜಿ ಪರಿಶೀಲನೆ ಮತ್ತು ಪ್ರಮಾಣೀಕರಣ

(ಡಿ) ತಾತ್ಕಾಲಿಕ ಆದ್ಯತಾ ಪಟ್ಟಿಯ ಪ್ರಕಟಣೆ

(ಇ) ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ

(ಎಫ್) ಅಂತಿಮ ಆದ್ಯತಾ ಪಟ್ಟಿಯ ಪ್ರಕಟಣೆ

(ಜಿ) ಜಿಲ್ಲಾ ಮಟ್ಟದಲ್ಲಿ ಕೌನ್ಸಿಲಿಂಗ್

(ಹೆಚ್) ವಿಭಾಗ ಮಟ್ಟದಲ್ಲಿ ಕೌನ್ಸಿಲಿಂಗ್

(ಐ) ರಾಜ್ಯಮಟ್ಟದಲ್ಲಿ ಕೌನ್ಸಿಲಿಂಗ್

5. ಖಾಲಿ ಹುದ್ದೆಗಳ ಅಧಿಸೂಚನೆ.- ವಿಷಯವಾರು ಅಗತ್ಯಕ್ಕೆ ತಕ್ಕಂತೆ ಲಭ್ಯವಿರುವ ಖಾಲಿ ಹುದ್ದೆಗಳ ಪ್ರಕಾರ ವರ್ಗಾವಣೆ ಮೇಲೆ ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳ ಪಟ್ಟಿಯನ್ನು ನಿರ್ಧರಿಸತಕ್ಕದ್ದು ಮತ್ತು ಸೂಚನಾ ಫಲಕದ ಮೇಲೆ ಪ್ರದರ್ಶಿಸತಕ್ಕದ್ದು. ಕೌನ್ಸಿಲಿಂಗ್ ಸಮಯದಲ್ಲಿ ಉಂಟಾದ ಖಾಲಿ ಹುದ್ದೆಗಳನ್ನು (consequential vacancies) ಸಹ ಖಾಲಿ ಹುದ್ದೆಗಳ ಪಟ್ಟಿಯಲ್ಲಿ ಸೇರಿಸತಕ್ಕದ್ದು ಮತ್ತು ಹಾಗೆ ಖಾಲಿ ಹುದ್ದೆಗಳು ಉಂಟಾದ ಕೂಡಲೇ ಗಣಕಯಂತ್ರದ ಪರದೆಯ ಮೇಲೆ ಪ್ರದರ್ಶಿಸತಕ್ಕದ್ದು.

6. ವರ್ಗಾವಣೆಗಳಿಗಾಗಿ ಅರ್ಜಿಗಳು.-ವರ್ಗಾವಣೆ ಕೋರಿರುವ ಎಲ್ಲಾ ಅರ್ಜಿಗಳನ್ನು ಇಲಾಖಾ ಮುಖ್ಯಸ್ಥರು ನಿರ್ದಿಷ್ಟಪಡಿಸಿದ ಅರ್ಜಿ ನಮೂನೆಗಳಲ್ಲಿ ಸಂಬಂಧಪಟ್ಟ ಸಂಸ್ಥೆಗಳ ಮುಖ್ಯಸ್ಥರ ಮೂಲಕ ಕಳುಹಿಸತಕ್ಕದ್ದು.

(2) ಸಂಸ್ಥೆಯ ಮುಖ್ಯಸ್ಥರು, ಸೂಕ್ತ ಪರಿಶೀಲನೆಯ ನಂತರ ಅರ್ಜಿಯನ್ನು, ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಕ್ಷೇತ್ರ ಶಿಕ್ಷಣ ಅಧಿಕಾರಿಗೆ, ಮಾಧ್ಯಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಶಿಕ್ಷಣ ಉಪ ನಿರ್ದೇಶಕರು (ಆಡಳಿತ) ಇವರಿಗೆ ಮತ್ತು ಪದವಿಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ಪದವಿಪೂರ್ವ ಶಿಕ್ಷಣ ಉಪನಿರ್ದೇಶಕರಿಗೆ ಕಳುಹಿಸತಕ್ಕದ್ದು.

(3) ಸಂಬಂಧಪಟ್ಟ ಅಧಿಕಾರಿಗಳು ಅರ್ಜಿ ನಮೂನೆಗಳಲ್ಲಿ ಒದಗಿಸಲಾದ ವಿವರಗಳು ಸರಿಯಿದೆಯೇ ಎಂಬುದನ್ನು ಪರಿಶೀಲಿಸತಕ್ಕದ್ದು ಮತ್ತು ಪ್ರಮಾಣೀಕರಿಸತಕ್ಕದ್ದು.

(4) ವರ್ಗಾವಣೆಗಳಿಗಾಗಿ ಬಂದ ಅರ್ಜಿಗಳ ಪರಿಶೀಲನೆಯ ನಂತರ ದತ್ತಾಂಶವನ್ನು (Data) ಗಣಕೀಕರಿಸತಕ್ಕದ್ದು.

7. ಆದ್ಯತಾ ಪಟ್ಟಿಯ ಸಿದ್ಧತೆ.- (1) ಪರಿಶೀಲಿಸಿದ ಎಲ್ಲಾ ಅರ್ಜಿಗಳನ್ನು ಕೆಳಕಂಡ ಆದ್ಯತಾ ಕ್ರಮದಲ್ಲಿ ಸಿದ್ಧಪಡಿಸತಕ್ಕದ್ದು:-

(ಎ) ಅಧಿನಿಯಮದ 6ನೇ ಪ್ರಕರಣದ (2)ನೇ ಉಪ ಪ್ರಕರಣದ (4)ನೇ ಖಂಡದ ಪ್ರಕಾರ ಅತ್ಯಂತ ತೀವ್ರ ಖಾಯಿಲೆಯ (terminally ill) ರೋಗಿಗಳ ಪ್ರಕರಣಗಳು, ಗಂಭೀರ ಖಾಯಿಲೆ ಪ್ರಕರಣಗಳು;

(ಬಿ) ಜಿಲ್ಲಾ ಶಸ್ತ್ರವೈದ್ಯರು ಪ್ರಮಾಣೀಕರಿಸಲಾದಂತೆ ಶೇಕಡಾ 40ಕ್ಕಿಂತ ಹೆಚ್ಚಿನ ಅಶಕ್ತತೆ ಇರುವ ದೈಹಿಕ ಅಂಗವಿಕಲ ಶಿಕ್ಷಕರ ಪ್ರಕರಣಗಳು.

(ಸಿ) ವಿಧವೆ ಶಿಕ್ಷಕಿಯರ ಪ್ರಕರಣಗಳು

(ಡಿ) ಅಧಿನಿಯಮದ 6ನೇ ಪ್ರಕರಣದ (2)ನೇ ಉಪ ಪ್ರಕರಣದ (1)ನೇ ಖಂಡದ ಪ್ರಕಾರ ವಿವಾಹಿತ ಶಿಕ್ಷಕರ ಪ್ರಕರಣಗಳು

(ಇ) ಇತರ ಶಿಕ್ಷಕಿಯರು

(ಎಫ್) ಈ ನಿಯಮಗಳ 9ನೇ ನಿಯಮದ ಪ್ರಕಾರ ಮನ್ನಣೆ ಪಡೆದ ರಾಜ್ಯ ಸರ್ಕಾರಿ ನೌಕರರ ಸಂಸ್ಥೆಗಳ ಚುನಾಯಿತ ಪದಾಧಿಕಾರಿಗಳು

(ಜಿ) ಇತರ ಶಿಕ್ಷಕರು.

(2) ಮೇಲಿನ ಪ್ರತಿಯೊಂದು ಆದ್ಯತಾ ಪ್ರವರ್ಗಗಳೊಳಗೆ ವೆಯ್‌ಟೆಡ್ ಸೇವೆಯನ್ನು ಗೊತ್ತುಪಡಿಸಿಕೊಳ್ಳುವ ಸಲುವಾಗಿ ಆದ್ಯತಾ ಪಟ್ಟಿಯನ್ನು ಸರ್ಕಾರವು ಅಧಿಸೂಚಿಸಿದ ಎ, ಬಿ ಮತ್ತು ಸಿ ವಲಯಗಳೆಂದು ವರ್ಗೀಕರಿಸಲಾದ ಎಲ್ಲ ಸ್ಥಳಗಳಲ್ಲಿ ಎಲ್ಲ ವೃಂದಗಳಲ್ಲಿ ಅರ್ಜಿದಾರನು ಸಲ್ಲಿಸಿರುವ ಸೇವಾ ವರ್ಷಗಳ ಸಂಖ್ಯೆಯನ್ನು ಕೆಳಗೆ ನಿರ್ದಿಷ್ಟಪಡಿಸಲಾದಂತೆ ಸಂಬಂಧಪಟ್ಟ ಆಯಾ ವಲಯಗಳಿಗೆ ಹಂಚಿಕೆ ಮಾಡಲಾದ ವೆಯ್‌ಟೇಜ್ ಅನುಪಾತದಿಂದ ಗುಣಿಸುವುದರ ಮೂಲಕ ಸಿದ್ಧಪಡಿಸತಕ್ಕದ್ದು:

(ಎ) ಎ ಪ್ರವರ್ಗದ ಶಾಲೆಗಳಿಗೆ ವೆಯ್‌ಟೆಡ್ ಸೇವೆ = ವಲಯದಲ್ಲಿನ ಎಲ್ಲಾ ಪದವೃಂದಗಳಲ್ಲಿ ಸಲ್ಲಿಸಲಾದ ಪೂರ್ಣಗೊಳಿಸಿದ ಸೇವಾ ವರ್ಷಗಳ ಸಂಖ್ಯೆ X 1.00

(ಬಿ) ಬಿ ಪ್ರವರ್ಗದ ಶಾಲೆಗಳಿಗೆ ವೆಯ್‌ಟೆಡ್ ಸೇವೆ = ವಲಯದಲ್ಲಿನ ಎಲ್ಲಾ ಪದವೃಂದಗಳಲ್ಲಿ ಸಲ್ಲಿಸಲಾದ ಪೂರ್ಣಗೊಳಿಸಿದ ಸೇವಾ ವರ್ಷಗಳ ಸಂಖ್ಯೆ X 1.50.

(ಸಿ) ಸಿ ಪ್ರವರ್ಗದ ಶಾಲೆಗಳಿಗೆ ವೆಯ್‌ಟೆಡ್ ಸೇವೆ = ವಲಯದಲ್ಲಿನ ಎಲ್ಲಾ ಪದವೃಂದಗಳಲ್ಲಿ ಸಲ್ಲಿಸಲಾದ ಪೂರ್ಣಗೊಳಿಸಿದ ಸೇವಾ ವರ್ಷಗಳ ಸಂಖ್ಯೆ X 2.00.

(3) ಆದ್ಯತಾ ಪಟ್ಟಿಯನ್ನು ಸಿದ್ಧಪಡಿಸುವಾಗ ಹೆಚ್ಚು ವೆಯ್‌ಟೆಡ್ ಸೇವೆ ಸಲ್ಲಿಸಿದ ಶಿಕ್ಷಕರುಗಳನ್ನು ಕಡಿಮೆ ವೆಯ್‌ಟೆಡ್ ಸೇವೆ ಸಲ್ಲಿಸಿದ ಶಿಕ್ಷಕರುಗಳ ಮೇಲೆ ಪರಿಗಣಿಸತಕ್ಕದ್ದು. ಸಮನಾಗಿದ್ದ ಪಕ್ಷದಲ್ಲಿ ಪ್ರತಿಯೊಬ್ಬರ ಜ್ಯೇಷ್ಠತೆಯನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು. ಜ್ಯೇಷ್ಠತೆಯೂ ಸಮನಾಗಿದ್ದ ಪಕ್ಷದಲ್ಲಿ ವಯಸ್ಸಿನಲ್ಲಿ ಹಿರಿಯರಾದವರನ್ನು ಕಿರಿಯರಿಗಿಂತ ಮೇಲಿರಿಸತಕ್ಕದ್ದು.

ಟಿಪ್ಪಣಿ: ವಿವಾಹಿತ ಶಿಕ್ಷಕರ ಸಂದರ್ಭದಲ್ಲಿ, ಈ ಮುಂದಿನ ಆದ್ಯತಾ ಕ್ರಮ ಇರತಕ್ಕದ್ದು, ಎಂದರೆ:-

(ಎ) ಪತಿ ಅಥವ ಪತ್ನಿ ಇಬ್ಬರೂ ಸರ್ಕಾರಿ ನೌಕರರಾಗಿರುವ ಪ್ರಕರಣಗಳು

(ಬಿ) ಪತಿ ಅಥವ ಪತ್ನಿ ಇಬ್ಬರಲ್ಲಿ ಒಬ್ಬರು ಸರ್ಕಾರಿ ನೌಕರರಾಗಿರದ ಪ್ರಕರಣಗಳು

(ಸಿ) ಇತರ ಪ್ರಕರಣಗಳು

(4) ಸಕ್ಷಮ ಪ್ರಾಧಿಕಾರಿಗಳು, ಮೇಲೆ ವಿವರಿಸಲಾದಂತೆ ತಾತ್ಕಾಲಿಕ ಆದ್ಯತಾ ಪಟ್ಟಿಯನ್ನು ತಯಾರಿಸತಕ್ಕದ್ದು ಮತ್ತು ಅದನ್ನು ಆಕ್ಷೇಪಣೆಗಳನ್ನು ಸಲ್ಲಿಸಲು 5 ದಿನಗಳ ಕಾಲಾವಕಾಶ ನೀಡಿ ಸೂಚನಾ ಫಲಕದಲ್ಲಿ ಮತ್ತು ಇಲಾಖಾ ವೆಬ್ ಸೈಟಿನಲ್ಲಿ ಅಧಿಸೂಚಿಸತಕ್ಕದ್ದು. ಶಿಕ್ಷಕರಿಂದ ಆಕ್ಷೇಪಣೆಗಳನ್ನು ಸ್ವೀಕರಿಸಿದ ತರುವಾಯ ಅವುಗಳನ್ನು ಪರೀಕ್ಷಿಸಿ ಅರ್ಹತೆಯ ಆಧಾರದ ಮೇಲೆ ಪರಿಗಣಿಸಬಹುದು ಅಥವಾ ತಿರಸ್ಕರಿಸಬಹುದು.

8. **ಗಣಕೀಕೃತ ಕೌನ್ಸಿಲಿಂಗ್ ಮೂಲಕ ಮಾಡಲಾಗುವ ವರ್ಗಾವಣೆಗೆ ಸಂಬಂಧಿಸಿದಂತೆ ಸಾಮಾನ್ಯ ಸೂಚನೆಗಳು.-** ಶಿಕ್ಷಕರ ಎಲ್ಲಾ ವರ್ಗಾವಣೆಗಳು ಮತ್ತು ಮರು ನಿಯೋಜನೆಗಳನ್ನು (redeployment) ಈ ಮುಂದಿನಂತೆ ಗಣಕೀಕೃತ ಕೌನ್ಸಿಲಿಂಗ್ ಮೂಲಕ ಮಾತ್ರ ಮಾಡತಕ್ಕದ್ದು:

1. ಸಾಮಾನ್ಯ ವರ್ಗಾವಣೆಗಳನ್ನು ಪ್ರತಿ ವರ್ಷದ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಮಾತ್ರ ಮಾಡತಕ್ಕದ್ದು.
2. ಸಾರ್ವಜನಿಕ ಹಿತಾಸಕ್ತಿಯ ಶಿಕ್ಷಕರ ವರ್ಗಾವಣೆಗಳನ್ನು ಅಧಿನಿಯಮದ 5ನೇ ಪ್ರಕರಣದ ಪ್ರಕಾರ ಮಾಡತಕ್ಕದ್ದು.
3. ತಮ್ಮ ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸದಿರುವ ಶಿಕ್ಷಕರ ವರ್ಗಾವಣೆಗಳನ್ನು ಯಾವುದೇ ಸಂದರ್ಭಗಳಲ್ಲೂ ಮಾಡತಕ್ಕದ್ದಲ್ಲ.
4. ಅಂತರ್ ಜಿಲ್ಲಾ ವರ್ಗಾವಣೆಗಳನ್ನು ಕರ್ನಾಟಕ ಸಿವಿಲ್ ಸೇವೆ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ 16-ಎ ನಿಯಮದಲ್ಲಿ ಹೇಳಲಾದಂತೆ ಪರಿಗಣಿಸಬೇಕು.
5. ಒಂದು ಜ್ಯೇಷ್ಠತಾ ಘಟಕದಿಂದ ಇನ್ನೊಂದು ಜ್ಯೇಷ್ಠತಾ ಘಟಕಕ್ಕೆ ಮಾಡುವ ಶಿಕ್ಷಕರ ವರ್ಗಾವಣೆಗಳನ್ನು ಅಧಿನಿಯಮದ 6ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಮಾಡತಕ್ಕದ್ದು.
6. ಸಾರ್ವಜನಿಕ ಹಿತಾಸಕ್ತಿಯಿಂದ ಮಾಡುವ ವರ್ಗಾವಣೆಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಹೊರತುಪಡಿಸಿ, ವರ್ಗಾವಣೆಗಳನ್ನು ಖಾಲಿ ಹುದ್ದೆಗಳಿಗೆ ಮಾತ್ರ ಮಾಡತಕ್ಕದ್ದು.
7. ಸಕ್ಷಮ ಪ್ರಾಧಿಕಾರಿಯ ಪೂರ್ವಾನುಮತಿಯನ್ನು ಪಡೆಯದೆ ಹೆಚ್ಚುವರಿ ಹುದ್ದೆಗಳನ್ನು ಅಥವಾ ಹುದ್ದೆಗಳೊಂದಿಗೆ ಹೆಚ್ಚುವರಿ ಶಿಕ್ಷಕರನ್ನು ಮರು ನಿಯೋಜನೆ ಮಾಡತಕ್ಕದ್ದಲ್ಲ.
8. ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆ ಕಾಲಿಕ ಶಿಕ್ಷಕರು ಮತ್ತು ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆಗಳನ್ನು ಪರಿಗಣಿಸತಕ್ಕದ್ದಲ್ಲ.
9. ಅಂಗವಿಕಲ ವ್ಯಕ್ತಿಗಳು ಸಲ್ಲಿಸಿದ ಪ್ರಮಾಣಪತ್ರವನ್ನು ಪರೀಕ್ಷಿಸುವ ಸಲುವಾಗಿ ಜಿಲ್ಲಾ ವೈದ್ಯಾಧಿಕಾರಿಯು ನಿಯೋಜಿಸಿದ ಒಬ್ಬ ಹಿರಿಯ ಶಸ್ತ್ರ ಚಿಕಿತ್ಸಕರು ಕೌನ್ಸಿಲಿಂಗ್ ವೇಳೆಯಲ್ಲಿರತಕ್ಕದ್ದು. ಸಂಶಯಾತ್ಮಕ ಪ್ರಕರಣಗಳನ್ನು ಜಿಲ್ಲಾ ವೈದ್ಯಾಧಿಕಾರಿಗೆ ಕಳುಹಿಸತಕ್ಕದ್ದು ಮತ್ತು ಜಿಲ್ಲಾ ವೈದ್ಯಾಧಿಕಾರಿಯವರ ನಿರ್ಣಯವು ಅಂತಿಮವಾಗಿರತಕ್ಕದ್ದು.
10. ಒಬ್ಬ ಶಿಕ್ಷಕನು, ಸರ್ಕಾರದಿಂದ ಮನ್ನಣೆ ಪಡೆದ ಕರ್ನಾಟಕ ರಾಜ್ಯ ಸರ್ಕಾರಿ ಶಿಕ್ಷಕರ ಸಂಘ ಅಥವಾ ಕರ್ನಾಟಕ ಸರ್ಕಾರಿ ನೌಕರರ ಸಂಘದ ಚುನಾಯಿತ ಪದಾಧಿಕಾರಿಯಾಗಿದ್ದಲ್ಲಿ, ಪ್ರತಿ ಬ್ಲಾಕ್ ಜಿಲ್ಲೆ ಅಥವಾ ರಾಜ್ಯಮಟ್ಟದಲ್ಲಿ 6 ಜನರನ್ನು ಮೀರದಂತೆ ಅಂಥ ಸರ್ಕಾರಿ ನೌಕರನನ್ನು ಅವನು ಯಾವ ಅವಧಿಗೆ ಆಯ್ಕೆಯಾಗಿರುವನೋ ಆ ಅವಧಿ ಮುಗಿಯುವವರೆಗೆ ಅವನನ್ನು ವರ್ಗಾಯಿಸತಕ್ಕದ್ದಲ್ಲ. ಸದರಿ ಅವಧಿ ಪೂರ್ಣಗೊಂಡ ಮೂರು ತಿಂಗಳುಗಳೊಳಗೆ ಚುನಾವಣೆಗಳು ನಡೆಯದಿರುವ ಸಂದರ್ಭದಲ್ಲಿ ಅವನನ್ನು ವರ್ಗಾಯಿಸಬಹುದು. ಅವನು ಮರು ಆಯ್ಕೆಯಾದ ಸಂದರ್ಭದಲ್ಲಿ ಎರಡನೇ ಅವಧಿ ಪೂರ್ಣಗೊಳ್ಳುವವರೆಗೆ ಅವನನ್ನು ಆ ಸ್ಥಾನದಲ್ಲಿ ಮುಂದುವರಿಸಬಹುದು. ಅವನು ಮೂರು ಅಥವಾ ತರುವಾಯದ ಅವಧಿಗಳಿಗೆ ಆಯ್ಕೆಯಾದರೂ ಸಹ ಅವನ ವರ್ಗಾವಣೆಗೆ ಯಾವುದೇ ಅಡೆತಡೆ ಇರತಕ್ಕದ್ದಲ್ಲ. ಸಕ್ಷಮ ಪ್ರಾಧಿಕಾರಿಯು ಅವನನ್ನು ವರ್ಗಾಯಿಸುವುದಕ್ಕೆ ಮುಂಚೆ ಅವನು ಎರಡನೇ ಅವಧಿಯನ್ನು ಪೂರ್ಣಗೊಳಿಸಿದ ವಿಷಯವನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಈ ಉದ್ದೇಶಕ್ಕಾಗಿ, ಸಂಘವು, ಸಾಧ್ಯವಾದಷ್ಟು ಬೇಗನೆ ಸಂಘಕ್ಕೆ ಆಯ್ಕೆಯಾದ ಚುನಾಯಿತ ಪದಾಧಿಕಾರಿಗಳ ಪಟ್ಟಿಯನ್ನು ಸಕ್ಷಮ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು.
11. ವಿಷಯವಾರು ಹುದ್ದೆಗಳಿಗೆ ಇತರ ವಿಷಯದ ಶಿಕ್ಷಕರುಗಳನ್ನು ಭರ್ತಿಮಾಡತಕ್ಕದ್ದಲ್ಲ. ಸಿಬ್ಬಂದಿ ವ್ಯವಸ್ಥೆಯ ಪ್ರಕಾರ,

(ಎ) ವಿಜ್ಞಾನ, ಇಂಗ್ಲೀಷ್, ಹಿಂದಿ ಮತ್ತು ದೈಹಿಕ ಶಿಕ್ಷಣ ಶಿಕ್ಷಕರುಗಳು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ

(ಬಿ) ಪಿಸಿಎಂ, ಸಿಬಿಝಡ್, ಕಲೆ, ಕನ್ನಡ, ಹಿಂದಿ ಮತ್ತು ದೈಹಿಕ ಶಿಕ್ಷಣ ಶಿಕ್ಷಕರು; ಮಾಧ್ಯಮಿಕ ಶಾಲೆಗಳಲ್ಲಿ ಮತ್ತು

(ಸಿ) ಆಯಾ ವಿಷಯಗಳ ಉಪನ್ಯಾಸಕರುಗಳು ಪದವಿ ಪೂರ್ವ ಕಾಲೇಜುಗಳಲ್ಲಿ ಲಭ್ಯಲಿದ್ದಾರೆಂಬುದನ್ನು ಎಲ್ಲಾ ಸಕ್ಷಮ ಪ್ರಾಧಿಕಾರಿಗಳು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

12. ಮ್ಯಾನ್ಯುಯಲ್ ಕೌನ್ಸಿಲಿಂಗ್ ಮೂಲಕ ವರ್ಗಾವಣೆಗಳನ್ನು ಮಾಡುವುದನ್ನು ನಿಷೇಧಿಸಲಾಗಿದೆ. ಮ್ಯಾನ್ಯುಯಲ್ ಕೌನ್ಸಿಲಿಂಗ್ ಮೂಲಕ ವರ್ಗಾವಣೆಗಳನ್ನು ಮಾಡಿದರೆ, ಅವುಗಳನ್ನು "ಅಕೃತ ಮತ್ತು ಶೂನ್ಯ" ವೆಂದು ಪರಿಗಣಿಸಲಾಗುವುದು ಮತ್ತು ಅಂಥ ವರ್ಗಾವಣೆಗಳಿಗೆ ಕಾರಣರಾದ ಅಧಿಕಾರಿಗಳು ಶಿಸ್ತು ಕ್ರಮಕ್ಕೆ ಒಳಗಾಗುವರು.

13. ಪರಸ್ಪರ ವರ್ಗಾವಣೆಗಳ ಸಂಖ್ಯೆಯನ್ನು ಹೊರತುಪಡಿಸಿ ಒಟ್ಟು ಕೋರಿಕೆ ಮೇರೆಗಿನ ಮತ್ತು ಸಾರ್ವಜನಿಕ ಹಿತಾಸಕ್ತಿಯ ವರ್ಗಾವಣೆಗಳ ಸಂಖ್ಯೆ ಶೇ 5 ಮತ್ತು ಅಂತರ ಘಟಕ ವರ್ಗಾವಣೆಗಳ ಸಂಖ್ಯೆ ಶೇ 1 ನ್ನು ಮೀರಬಾರದು.

9. **ದೂರುಗಳ ಆಧಾರದ ಮೇಲೆ ವರ್ಗಾವಣೆಗಳು.**- ದೂರಿನ ಆಧಾರದ ಮೇಲಿನ ವರ್ಗಾವಣೆಗಳ ಪ್ರಕರಣಗಳಲ್ಲಿ ಸರ್ಕಾರದ ಆದೇಶ ಸಂ ಡಿಪಿಎಆರ್ 4 ಎಸ್‌ಟಿಆರ್ 2001, ದಿನಾಂಕ : 22-11-2001ರ 7(ಎಫ್) ಪ್ಯಾರಾದ ಸೂಚನೆಗಳನ್ನು ಅನುಸರಿಸತಕ್ಕದ್ದು.

10. **ಪರಸ್ಪರ ವರ್ಗಾವಣೆಗಳು.**- (1) ಶಿಕ್ಷಕರ ಪರೀಕ್ಷಾರ್ಥ ಅವಧಿಯು ತೃಪ್ತಿಕರವಾಗಿದೆಯೆಂದು ಘೋಷಿಸಲ್ಪಟ್ಟಿದ್ದರೆ ಅವರ ಪರಸ್ಪರ ವರ್ಗಾವಣೆ ಮನವಿಗಳನ್ನು ಪರಿಗಣಿಸಬಹುದು.

(2) ವರ್ಗಾವಣೆಗಳು ಮೇಲೆ ನಿರ್ದಿಷ್ಟಪಡಿಸಲಾದಂತೆ ಶೇ 5 ಅಥವಾ ಶೇ 1 ಮಿತಿಯೊಳಗೆ ಇದೆಯೇ ಎಂಬುದನ್ನು ತೀರ್ಮಾನಿಸುವುದಕ್ಕಾಗಿ ವರ್ಗಾವಣೆಗಳ ಸಂಖ್ಯೆಯನ್ನು ಲೆಕ್ಕ ಹಾಕಲು ಪರಸ್ಪರ ವರ್ಗಾವಣೆಗಳ ಸಂಖ್ಯೆಯನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

(3) ಎಲ್ಲ ಪರಸ್ಪರ ವರ್ಗಾವಣೆಗಳನ್ನು, ಇಬ್ಬರು ಶಿಕ್ಷಕರೂ ಅದಕ್ಕೆ ಲಿಖಿತದಲ್ಲಿ ಒಪ್ಪಿಕೊಂಡರೆ ಮಾತ್ರ ಮಾಡತಕ್ಕದ್ದು. ವರ್ಗಾವಣೆ ಆದೇಶಗಳನ್ನು ಹೊರಡಿಸುವುದಕ್ಕೆ ಮುಂಚೆ ಈ ಸಂಗತಿಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.

11. **ಗಣಕೀಕೃತ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಪ್ರಕ್ರಿಯೆ.**- ಆದ್ಯತಾ ಪಟ್ಟಿಯಲ್ಲಿರುವ ಅರ್ಜಿದಾರರಿಗೆ ಪತ್ರಿಕಾ ಟಿಪ್ಪಣಿಗಳು, ಆಕಾಶವಾಣಿ ಮತ್ತು ದೂರದರ್ಶನ ಪ್ರಕಟಣೆಗಳ ಮೂಲಕ ಕೌನ್ಸಿಲಿಂಗ್‌ಗಾಗಿ ನಿಗದಿಪಡಿಸಿದ ದಿನಾಂಕದ/ಗಳ ಬಗ್ಗೆ ತಿಳಿಸತಕ್ಕದ್ದು. ಅರ್ಜಿದಾರರನ್ನು ಗೊತ್ತುಪಡಿಸಿದ ದಿನಾಂಕದಂದು ಅವರವರ ಆದ್ಯತೆಯ ಕ್ರಮಾನುಸಾರ ಕೌನ್ಸಿಲಿಂಗ್‌ಗೆ ಕರೆಯತಕ್ಕದ್ದು ಮತ್ತು ತರುವಾಯ ಗಣಕಯಂತ್ರ ಪರದೆಯ ಮೇಲೆ ಪ್ರದರ್ಶಿತವಾಗಿರುವಂತೆ ಅಂಥ ಅವಧಿಯಲ್ಲಿ ಲಭ್ಯವಿರುವ ಹುದ್ದೆಗಳಲ್ಲಿ ಯಾವುದೇ ಒಂದನ್ನು ಆಯ್ಕೆ ಮಾಡಿಕೊಳ್ಳಲು ತಿಳಿಸತಕ್ಕದ್ದು.

12. **ಆದೇಶಗಳನ್ನು ಹೊರಡಿಸುವುದು.**- ಸಕ್ಷಮ ಪ್ರಾಧಿಕಾರಿಯು ಅರ್ಜಿದಾರನ ಆಯ್ಕೆಯಂತೆ ಆಗಲೇ ಮತ್ತು ಅಲ್ಲಿಯೇ ವರ್ಗಾವಣೆ ಆದೇಶವನ್ನು ಹೊರಡಿಸತಕ್ಕದ್ದು ಮತ್ತು ಖಾಲಿ ಹುದ್ದೆಗಳ ಪಟ್ಟಿಯಿಂದ ಆ ಖಾಲಿ ಹುದ್ದೆಯನ್ನು ತೆಗೆದುಹಾಕತಕ್ಕದ್ದು. ಒಂದು ಪ್ರತಿಯನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಒಂದು ಪ್ರತಿಯನ್ನು ಅರ್ಜಿದಾರನಿಗೆ ನೀಡತಕ್ಕದ್ದು.

13. **ಕೌನ್ಸಿಲಿಂಗ್ ಅನ್ನು ಪೂರ್ಣಗೊಳಿಸುವುದು.**- ಈ ವರ್ಗಾವಣೆಯ ಆಯ್ಕೆ ಪ್ರಕ್ರಿಯೆಯನ್ನು ವರ್ಗಾವಣೆಗಳ ಸಂಖ್ಯೆ ಗರಿಷ್ಠ ಮಿತಿಯನ್ನು ತಲುಪುವವರೆಗೆ ಅಥವಾ ಇಲಾಖೆಗಳ ಮುಖ್ಯಸ್ಥರು ತಿಳಿಸಿದ ನಿಗದಿತ ಸಮಯದೊಳಗೆ ಎಲ್ಲಾ ಅರ್ಜಿದಾರರು ಸಂಪೂರ್ಣವಾಗಿ ಮುಗಿಯುವವರೆಗೆ ಮುಂದುವರಿಸತಕ್ಕದ್ದು.

14. **ಸೂಚನಾ ಫಲಕದ ಮೇಲೆ ಪ್ರದರ್ಶಿಸುವುದು.**- ವರ್ಗಾವಣೆ ಮಾಡಲಾದ ಶಿಕ್ಷಕರ ಪಟ್ಟಿಯನ್ನು, ಅವರ ಹೆಸರುಗಳ ಮುಂದೆ ವರ್ಗಾವಣೆಯ ಸ್ಥಳಗಳನ್ನು ಸೂಚಿಸಿ ಸೂಚನಾ ಫಲಕದ ಮೇಲೆ ಸಹ ಪ್ರದರ್ಶಿಸತಕ್ಕದ್ದು. ಈ ಪಟ್ಟಿಯನ್ನು ಪ್ರದರ್ಶಿಸಿದ ತರುವಾಯ ಯಾವುದೇ ವರ್ಗಾವಣೆಯನ್ನು ಮಾಡತಕ್ಕದ್ದಲ್ಲ. ಈ ಪಟ್ಟಿಯನ್ನು ಪ್ರದರ್ಶಿಸಿದ ತರುವಾಯ ಯಾವುದೇ ವರ್ಗಾವಣೆಗಳನ್ನು ಮಾಡಲಾಗಿದ್ದರೆ, ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಯನ್ನು ವೈಯಕ್ತಿಕವಾಗಿ ಹೊಣೆಗಾರರನ್ನಾಗಿ ಮಾಡತಕ್ಕದ್ದು ಮತ್ತು ಅವರ ವಿರುದ್ಧ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು.

15. **ಬಿಡುಗಡೆ.**- ವರ್ಗಾವಣೆ ಆದೇಶಗಳು ಪಡೆದ ಶಿಕ್ಷಕರನ್ನು ಸಕ್ಷಮ ಪ್ರಾಧಿಕಾರಿಯು ಅವರ ಸೇವಾ ವಿವರಗಳನ್ನು ಪರಿಶೀಲಿಸಿದ ತರುವಾಯ ಮಾತ್ರ ಬಿಡುಗಡೆಗೊಳಿಸತಕ್ಕದ್ದು.

16. **ಕೌನ್ಸಿಲಿಂಗ್ ಮೂಲಕ ಜ್ಯೇಷ್ಠತಾ ಘಟಕದ ಹೊರಗೆ ಕೋರಿಕೆ ವರ್ಗಾವಣೆಗಳು**.- (1) ಜ್ಯೇಷ್ಠತಾ ಘಟಕಗಳ ಹೊರಗಿನ ಸ್ಥಳಗಳಿಗೆ ಸಂಬಂಧಪಟ್ಟ ವರ್ಗಾವಣೆಗಳ ಬಗ್ಗೆ, ಸರ್ಕಾರೀ ಆದೇಶ ಸಂಖ್ಯೆ ಇಡಿ 298 ಡಿಪಿಐ 2005 ದಿನಾಂಕ 4-5-2005ರಲ್ಲಿರುವ ಸಂಬಂಧಪಟ್ಟ ಉಪಬಂಧವನ್ನು ಅನುಸರಿಸತಕ್ಕದ್ದು.

(2) ಕೌನ್ಸಿಲಿಂಗ್ ಮೂಲಕ ಜಿಲ್ಲಾಮಟ್ಟದಲ್ಲಿ ವರ್ಗಾವಣೆಗಳು ಪೂರ್ಣಗೊಂಡ ಕೂಡಲೇ, ಸಕ್ಷಮ ಪ್ರಾಧಿಕಾರಿಯು ಜಿಲ್ಲೆಯಲ್ಲಿ ಉಳಿದಿರುವ ಖಾಲಿ ಹುದ್ದೆಗಳ ಬಗೆಗಿನ ಮಾಹಿತಿಯನ್ನು ನೀಡತಕ್ಕದ್ದು ಮತ್ತು ಅಂತರ ಜಿಲ್ಲೆ ವರ್ಗಾವಣೆಗಳಿಗೆ ಕೋರಿಕೆಗಳನ್ನು ಕೆಳಗೆ ವಿವರಿಸಿರುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನೀಡತಕ್ಕದ್ದು.

| ಕ್ರಮ ಸಂಖ್ಯೆ | ವಿಭಾಗ | ಅಧಿಕಾರಿ |
|---|---|---|
| 1. | ಗುಲ್ಬರ್ಗಾ ವಿಭಾಗ | ಸಾರ್ವಜನಿಕ ಶಿಕ್ಷಣ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ, ಹೆಚ್ಚುವರಿ ಆಯುಕ್ತರ ಕಚೇರಿ, ಗುಲ್ಬರ್ಗ/ ಪದವಿ ಪೂರ್ವ ಶಿಕ್ಷಣ ಆಯುಕ್ತರು, ಬೆಂಗಳೂರು |
| 2. | ಬೆಳಗಾಂ ವಿಭಾಗ | ಸಾರ್ವಜನಿಕ ಶಿಕ್ಷಣ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ, ಹೆಚ್ಚುವರಿ ಆಯುಕ್ತರ ಕಚೇರಿ, ಧಾರವಾಡ/ ಪದವಿ ಪೂರ್ವ ಶಿಕ್ಷಣ ಆಯುಕ್ತರು, ಬೆಂಗಳೂರು |
| 3. | ಮೈಸೂರು ವಿಭಾಗ | ನಿರ್ದೇಶಕರು, (ಸೆಕೆಂಡರಿ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಆಯುಕ್ತರ ಕಚೇರಿ, ಬೆಂಗಳೂರು/ ಪದವಿ ಪೂರ್ವ ಶಿಕ್ಷಣ ಆಯುಕ್ತರು, ಬೆಂಗಳೂರು |
| 4. | ಬೆಂಗಳೂರು ವಿಭಾಗ | ನಿರ್ದೇಶಕರು, (ಪ್ರಾಥಮಿಕ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಆಯುಕ್ತರ ಕಚೇರಿ, ಬೆಂಗಳೂರು/ ಪದವಿ ಪೂರ್ವ ಶಿಕ್ಷಣ ಆಯುಕ್ತರು, ಬೆಂಗಳೂರು |

(3) ಅಂತರ ಘಟಕ ವರ್ಗಾವಣೆಗಾಗಿ ಪ್ರತ್ಯೇಕ ನಮೂನೆಯನ್ನು ನಿರ್ದಿಷ್ಟಪಡಿಸಲಾಗಿದೆ.

(4) ವಿಭಾಗೀಯ ಮಟ್ಟದಲ್ಲಿ ವರ್ಗಾವಣೆಗಳನ್ನು ಪೂರ್ಣಗೊಳಿಸಿದ ತರುವಾಯ, ಸಂಬಂಧಪಟ್ಟ ನಿರ್ದೇಶಕರು ಉಳಿದಿರುವ ಖಾಲಿ ಹುದ್ದೆಗಳ ಬಗ್ಗೆ ಮಾಹಿತಿಯನ್ನು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ಒದಗಿಸತಕ್ಕದ್ದು.

(5) ಅಂತರ ಘಟಕ ವರ್ಗಾವಣೆಗಳನ್ನು ಕೌನ್ಸಿಲಿಂಗ್ ಮೂಲಕ ಎ ಮತ್ತು ಬಿ ವಲಯಗಳ ಶಾಲೆಗಳ ಖಾಲಿ ಸ್ಥಾನದ ಹುದ್ದೆಗಳಿಗೆ ಮಾಡತಕ್ಕದ್ದು. ಸಿ ವಲಯದ ಶಾಲೆಗಳಿಗೆ ಅಂತರ ಘಟಕ ವರ್ಗಾವಣೆಗಳನ್ನು ಮಾಡತಕ್ಕದ್ದಲ್ಲ.

17. **ಅಧಿಕಾರಿಗಳ ಹೊಣೆಗಾರಿಕೆ**.- ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಯು ವರ್ಗಾವಣೆಗಳನ್ನು ಮಾಡುವಾಗ ಮೇಲಿನ ನಿಯಮಗಳನ್ನು ಪಾಲಿಸಲಾಗಿದೆಯೆಂಬುದನ್ನು ಖಾತರಿಪಡಿಸಿಕೊಳ್ಳತಕ್ಕದ್ದು ಮತ್ತು ಯಾವುದೇ ಉಲ್ಲಂಘನೆಗೆ ಅವರನ್ನು ವೈಯಕ್ತಿಕವಾಗಿ ಹೊಣೆಗಾರರಾಗಿ ಮಾಡತಕ್ಕದ್ದು ಮತ್ತು ಅವರ ವಿರುದ್ಧ ಕಠಿಣ ಶಿಕ್ಷೆ ವಿಧಿಸುವ ನಿಟ್ಟಿನಲ್ಲಿ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು.

18. **ಇಲಾಖಾ ಮುಖ್ಯಸ್ಥರ ಅಧಿಕಾರಗಳು**.- ಕೆಳಕಂಡ ಸಂದರ್ಭಗಳಲ್ಲಿ ಮಾತ್ರ ಶೈಕ್ಷಣಿಕ ವರ್ಷದ ಅವಧಿಯಲ್ಲಿ ಶಿಕ್ಷಕರ ವರ್ಗಾವಣೆಯನ್ನು ಮಾಡಲು ಇಲಾಖಾ ಮುಖ್ಯಸ್ಥರಿಗೆ ಅಧಿಕಾರ ನೀಡಲಾಗಿದೆ, ಎಂದರೆ:-

(ಎ) ಅಮಾನತ್ತಿನ ಬದಲಾಗಿ ಶಿಸ್ತಿನ ಕ್ರಮ ತೆಗೆದುಕೊಳ್ಳುವ ಸಂದರ್ಭದಲ್ಲಿ;

(ಬಿ) ಬಡ್ತಿಯ ಪರಿಣಾಮವಾಗಿ ಉಂಟಾಗುವ ಸಂದರ್ಭದಲ್ಲಿ;

(ಸಿ) ಹೆಚ್ಚುವರಿ ಹುದ್ದೆಗಳು ಮತ್ತು ಹೆಚ್ಚುವರಿ ಶಿಕ್ಷಕರು ಇದ್ದಲ್ಲಿ ಅವುಗಳ/ ಅವರ ಮರು ನಿಯೋಜನೆಯ ಪರಿಣಾಮವಾಗಿ ಉಂಟಾಗುವ ಸಂದರ್ಭದಲ್ಲಿ

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಬಿ. ಹೆಚ್. ಪಡಸಲಗಿ**

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ

(581)

ಶಿಕ್ಷಣ ಸಚಿವಾಲಯ

## ಅಧಿಸೂಚನೆ

ಸಂಖ್ಯೆ: ಇಡಿ 173 ಇಟಿಆರ್ 2007, ಬೆಂಗಳೂರು, ದಿ: 14ನೇ ನವೆಂಬರ್ 2007

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2007 ರ ಕಲಂ 2 ರಲ್ಲಿನ ಉಪಖಂಡಗಳಾದ (ಇ) ಮತ್ತು (ಕೆ) ರಂತೆ ಶಿಕ್ಷಕರುಗಳ/ಉಪನ್ಯಾಸಕರ ಸೇ[illegible] ನೇಮಕಾತಿ/ವಿಲೀನಗೊಳಿಸುವ ಮೂಲಕ ಅಥವಾ ಬಡ್ತಿ ಮೂಲಕ ಹಾಗೂ ವರ್ಗಾವಣೆಗಾಗಿ ಎಲ್ಲ[illegible] ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆಗಳನ್ನು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಈ ಕೆಳಕಂಡಂತೆ ಎ, ಬಿ ಮತ್ತು ಸಿ ವಲಯಗಳಾಗಿ ವರ್ಗೀಕರಿಸಿ ಈ ಮೂಲಕ ಅಧಿಸೂಚಿಸಿದೆ.

| ಶಾಲಾ ಕಾಲೇಜುಗಳ ವಲಯಗಳು | ವರ್ಗೀಕರಣದ ಪ್ರದೇಶ ಹಾಗೂ ವ್ಯಾಪ್ತಿ |
|---|---|
| (1) | (2) |
| ಎ ವರ್ಗ | ಎಲ್ಲಾ ಮಹಾನಗರ ಪಾಲಿಕೆಗಳು, ನಗರ ಪಾಲಿಕೆಗಳು, ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯತ್, ಅಧಿಸೂಚಿತ ಪ್ರದೇಶಗಳು, ಪಟ್ಟಣ ಪ್ರದೇಶ ಹಾಗೂ ತಾಲ್ಲೂಕು ಕೇಂದ್ರಗಳ ವ್ಯಾಪ್ತಿ ಸರಹದ್ದಿನ ಒಳಗಿನ ಪ್ರದೇಶಗಳು. |
| ಬಿ ವರ್ಗ | ಬೆಂಗಳೂರು ನಗರದ ಗಡಿಯಿಂದ 20 ಕಿ.ಮೀ., ಇತರ ಮಹಾನಗರ ಪಾಲಿಕೆಗಳ ಗಡಿಯಿಂದ 15 ಕಿ.ಮೀ., ಜಿಲ್ಲಾ ಕೇಂದ್ರ ಸ್ಥಾನಗಳು, ನಗರ ಪಾಲಿಕೆಗಳ ಗಡಿಯಿಂದ 10 ಕಿ.ಮೀ., ಇತರೆ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್, ಅಧಿಸೂಚಿತ ಪ್ರದೇಶ, ತಾಲ್ಲೂಕು ಕೇಂದ್ರ ಸ್ಥಾನಗಳ ಗಡಿಯಿಂದ 5 ಕಿ.ಮೀ ಒಳಗಿನ ಪ್ರದೇಶಗಳು |
| ಸಿ ವರ್ಗ | ಎ ಮತ್ತು ಬಿ ವರ್ಗದ ಪ್ರದೇಶಗಳನ್ನು ಹೊರತು ಪಡಿಸಿ ಇನ್ನುಳಿದ ಎಲ್ಲಾ ಗ್ರಾಮಾಂತರ ಪ್ರದೇಶಗಳು |

<u>ವಿವರಣೆ:</u>

ನಗರ ಪ್ರದೇಶವೆಂದರೆ ಬೆಂಗಳೂರಿನಿಂದ 20 ಕಿ.ಮೀ ಪರಿಧಿಯೊಳಗಿನ ನಗರ ಪ್ರದೇಶ ಮತ್ತ[illegible] ವಸತಿ ಪ್ರದೇಶಗಳು, ಅಥವಾ ಜಿಲ್ಲಾ ಕೇಂದ್ರಗಳಿಂದ 10 ಕಿ.ಮೀ ಪರಿಧಿಯೊಳಗಿನ ಪ್ರದೇಶಗಳು ಅಥವಾ ತಾಲ್ಲೂಕು ಕೇಂದ್ರಗಳು ಹಾಗೂ ಇತರೆ ನಗರಗಳಿಂದ 5 ಕಿ.ಮೀ ಪರಿಧಿಯೊಳಗಿನ ಪ್ರದೇಶಗಳು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
[signature] 14.11.07
(ಬಿ. ಹೆಚ್. ಪಡಸಲಗಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ

ಇವರಿಗೆ: ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲ ಹಾಗೂ 2000 ಪ್ರತಿಗಳನ್ನು ಶಿಕ್ಷಣ ಇಲಾಖೆಯ ಪ್ರಾಥಮಿಕ ಶಿಕ್ಷಣ–ಬಿ ಶಾಖೆಗೆ ಒದಗಿಸಲು ಕೋರಿದೆ.

ಪ್ರತಿಗಳು: